# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

**ಅಸಲು ದಾವಾ ನಂಃ48/2019**
**ಪಿ.ಡಬ್ಲ್ಯೂಃ2, ಬಾಬು**

ದಿನಾಂಕ :08-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.
ಪಾಟಿ ಸವಾಲು :- ಶ್ರೀ ಟಿ ವಿ ಪಿ ವಕೀಲರಿಂದ

ನಾನು ಸುತಾಣ ಗ್ರಾಮದವನ್ನು. ಗುಂಡಪ್ಪ ನನ್ನ ಮಾವ. ಗುಂಡಪ್ಪನಿಗೆ 3 ಜನ ಹೆಣ್ಣು ಮಕ್ಕಳು 2 ಗಂಡು ಮಕ್ಕಳು ಅದರಲ್ಲಿ ಒಬ್ಬ ಗಂಡು ಮಗ ನಾಗಪ್ಪ ತೀರಿಕೊಂಡಿರುತ್ತಾನೆ. ಸೈಯದಪ್ಪ ಯಲ್ಲಮ್ಮ, ಮಲ್ಲಮ್ಮ ಮತ್ತು ಕಾಳಮ್ಮ ಅವರ ಮಕ್ಕಳು ಎಂದರೆ ಸರಿ. ಸದರಿ ಕಾಳಮ್ಮ ನನ್ನ ಹೆಂಡತಿ ಎಂದರೆ ಸರಿ. ನನಗೆ ಅವರು ಮದುವೆ ಆಗುವ ಮೊದಲೆ ಸಂಬಂಧಿಕರು. ಕಾಳಮ್ಮ ಕೋನೆಯ ಮಗಳು ಎಂದರೆ ಸರಿ. ಸೈದಪ್ಪನಿಗೆ ಹಾಗೂ ಕಾಳಮ್ಮನಿಗೆ 15 ವರ್ಷ ವ್ಯತಾಸ ಎಂದರೆ ಸರಿ. ಸೈದಪ್ಪನ ಮದುವೆ ಆದ 4-5 ವರ್ಷದ ನಂತರ ನನ್ನ ಮದುವೆ ಆಗಿದೆ ಎಂದರೆ ಸರಿ. ಮಾಹಾದೇವಿಗೆ ಸಣ್ಣ ವಯಸ್ಸಿನಲ್ಲಿ ಮದುವೆ ಏಕೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ಅವಳು ಸೈದಪ್ಪನ ಮೊದಲ ಹೆಂಡತಿ ಎಂದು ತೋರಿಸಲು ಲಗ್ನ ಪತ್ರ ಯಾವುದೇ ದಾಖಲೆ ಇಲ್ಲ, ಮಾಹಾದೇವಿ ಇವರಿಗೆ ಹುಟ್ಟಿದ ಮಕ್ಕಳು ಬದುಕುತ್ತಿರಲಿಲ್ಲ ಆದ ಕಾರಣ ನಾಗಮ್ಮ ಇವರನ್ನು 2 ನೇ ಮದುವೆ ಆದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸೈದಪ್ಪ ಇವರು ನಾಗಮ್ಮ ಇವರನ್ನು ಮೊದಲೇನೆ ಮದುವೆಯಾಗಿದ್ದು ಅವರಿಗೆ ಮೊದಲನೇಯ ಮಗ ಹುಟ್ಟಿದ ನಂತರ ಮಾಹಾದೇವಿಯವರನ್ನು 2 ನೇ ಮದುವೆಯಾಗಿದ್ದಾರೆ ಎಂದು ಹೇಳುವುದು ಸುಳ್ಳು.

ಸಂಗೀತ, ಬಸಮ್ಮ, ಭೀಮಬಾಯಿ ಮತ್ತು ಸುನೀತಾ ಇವರು ಮಾಹಾದೇವಿಯ ಮಕ್ಕಳು. ನನ್ನ ಹೆಂಡತಿ ತೀರಿಕೋಂಡ ನಂತರ ನಾನು ಮಲ್ಲಮ್ಮ ಇವರು ಗುಂಡಪ್ಪನ ಆಸ್ತಿ ಎಂದು ಪಾಲು ಕೇಳಿದ್ದು ಸೈದ್ದಪ್ಪನ ಹೆಸರಿಗೆ ಆಗಿದ್ದರಿಂದ ನಮ್ಮ ಅವರ ನಡುವೆ ಸಂಬಂಧ ಸರಿ ಇಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ಸೈದಪ್ಪನ ಸಂಬಂಧ ಸರಿ ಇಲ್ಲ ಕಾರಣ ಮಾಹಾದೇವಿಯು 1 ನೇ ಹೆಂಡತಿ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ

# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

ಅಸಲು ದಾವಾ ನಂಃ**48/2019**
ಪಿ.ಡಬ್ಲ್ಯೂಃ**3,** ಪ್ರಭು

ದಿನಾಂಕ **:08-09-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.
ಪಾಟಿ ಸವಾಲು :- ಶ್ರೀ ಟಿ ವಿ ಪಿ ವಕೀಲರಿಂದ

ನನ್ನ ಅತ್ತೆಯ ಹೆಸರು ಮಾಹಾದೇವಿ. ನನ್ನ ಅಣ್ಣನ ಹೆಸರು ಅಶೋಕ. ಅಶೋನ ಹೆಂಡತಿ ಹೆಸರು ಬಸಮ್ಮ. ಅವರು ಈ ಕೇಸಿನಲ್ಲಿ ವಾದಿಯಾಗಿದ್ದಾರೆ ಎಂದರೆ ಸರಿ. ನಾನು ನನ್ನ ವಯಸ್ಸು 50 ಎಂದು ತೋರಿಸಲು ಆಧಾರ ಕಾರ್ಡ ಹಾಕಿಲ್ಲ. ನನಗೆ 40-45 ವರ್ಷ ಇದೆ ಎಂದರೆ ಸರಿಯಲ್ಲ. ನಾನು ಸೈದಪ್ಪನ ತಂಗಿಯಾದ ಮಲ್ಲಮ್ಮನ ಮಗ. ಮಾಹಾದೇವಿ ಸೈದಪ್ಪನ ಮೊದಲ ಹೆಂಡತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸೈದಪ್ಪನ ಮದುವೆಯಾದಾಗ ನಾನು ಸಣ್ಣ ಹುಡುಗ ಇದ್ದೆ ಎಂದರೆ ಸರಿ. ನಾನು ನನ್ನ ಕಾಕ ಇಬ್ಬರು ಗುಂಡಪ್ಪನ ಆಸ್ತಿಯಲ್ಲಿ ಪಾಲು ಬೇಕು ಎಂದು ಕೇಳಿದ್ದೇವೆ ಎಂದರೆ ಸರಿ. ಯಾರು ಮೊದಲನೆಯ ಹೆಂಡತಿ ಯಾರು 2 ನೇ ಹೆಂಡತಿ ಎಂದು ಗೊತ್ತಿಲ್ಲದಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ